ಹೇಳುತ್ತಿದ್ದರು: 'ಯಾರಲ್ಲಿ ಭಯವಿರುತ್ತದೋ ಅವರಿಗೇ ಜಯ' ಎಂದು. ಇಲ್ಲಿ ಭಯವೆಂದರೆ ದುರ್ನಡತೆಯ ವಿಷಯದಲ್ಲಿರುವ ಸಂಕೋಚ ಅಥವಾ ಲಜ್ಜೆ. ಈ ಲಜ್ಜೆಯನ್ನು ಅಂತಃಸಾಕ್ಷಿ (*inner conscience*) ಎಂದೂ ಕರೆಯಬಹುದು. ಈ ಲಜ್ಜೆ ಹೋಯಿತೆಂದರೆ ವ್ಯಕ್ತಿಯು ಯಾವುದಕ್ಕೂ ಹೇಸುವುದಿಲ್ಲ. ಅವನಿಗೆ ಅವಮಾನವೆಂಬುದೇ ಇಲ್ಲವಾಗುತ್ತದೆ. ಇದು ನೈತಿಕ ಮತ್ತು ಆಧ್ಯಾತ್ಮಿಕ ಸಾವು. ಆದ್ದರಿಂದ ನಮ್ಮ ನಡೆನುಡಿಯಲ್ಲಿ ಗಾಂಭೀರ್ಯ, ಲಜ್ಜಾಸ್ವಭಾವ ಇದ್ದರೆ ಅದು ನಮ್ಮನ್ನು ನೈತಿಕ ಅವನತಿಯಿಂದ ಪಾರು ಮಾಡುತ್ತದೆ.

### ಲಜ್ಜೆಯೇ ಭೂಷಣ

ಒಮ್ಮೆ ಉದ್ಬೋಧನದಲ್ಲಿ ರಾಧಿ (ಅವರ ತಮ್ಮನ ಮಗಳು) ಗೆಜ್ಜೆಯನ್ನು ಧರಿಸಿ ಮಹಡಿ ಮೆಟ್ಟಿಲಿನಿಂದ ಸರಸರನೆ ಇಳಿದು ಬರುತ್ತಿದ್ದಳು. ಆಗ ಶ್ರೀಮಾತೆಯವರು ಆಕೆಯನ್ನು ಗಟ್ಟಿಯಾಗಿ ಗದರಿಸಿ, 'ರಾಧಿ ಏನು ಮಾಡುತ್ತಿರುವೆ? ಕೆಳಗೆ ನನ್ನ ಮಕ್ಕಳು ದೇವರ ಧ್ಯಾನ ಮಾಡುತ್ತಿದ್ದಾರೆ. ನೀನು ಇಷ್ಟೊಂದು ಶಬ್ದ ಮಾಡುತ್ತಿದ್ದೀಯ. ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೇ' ಎಂದರು. ಒಮ್ಮೆ ರಾಧಿ ತೊಟ್ಟ ಬಟ್ಟೆಯನ್ನು ಮೊಣಕಾಲ ಮೇಲಕ್ಕೆ ಎಳೆದಳು. ಆಗ ಶ್ರೀಮಾತೆಯವರು 'ಅಹಾ! ಸ್ತ್ರೀಯರು ಮೊಣಕಾಲ ಮೇಲಕ್ಕೆ ಬಟ್ಟೆ ಧರಿಸಿದರೆ ನಗ್ನರೆಂದೇ ಹೇಳಬೇಕು' ಎಂದರು. ಸ್ತ್ರೀಗೆ ಲಜ್ಜೆಯೇ ಭೂಷಣ ಎನ್ನುತ್ತಿದ್ದರು. ವ್ರೀಡಾ ಚೇತ್ ಕಿಮು **ಭೂಷಣೈಃ** —'ಲಜ್ಜೆಯಿದ್ದರೆ ಆಭರಣದ ಆವಶ್ಯಕತೆಯೇನು?' ಎನ್ನುತ್ತಾನೆ ಭರ್ತೃಹರಿ.

ಸ್ತ್ರೀಯರು ಸದಾ ಸರಳರಾಗಿ, ಲಜ್ಜಾವತಿಯರಾಗಿರ ಬೇಕೆಂದೇ ಶ್ರೀಮಾತೆಯವರ ಆದೇಶ. ಇಂತಹ ಲಜ್ಜಾಪಟಾವೃತೆ ಯಾದ ಶ್ರೀ ಮಾತೆಯವರು ಸದಾ ನಮ್ಮನ್ನು ಅದೇ ಮಾರ್ಗದಲ್ಲಿ ಕರೆದುಕೊಂಡು ಹೋಗಲಿ ಎಂದು ಪ್ರಾರ್ಥಿಸೋಣ. ಇಂದಿನ ನವ ಯುಗದ ಸ್ತ್ರೀಯರಿಗೆ ಶ್ರೀಮಾತೆಯವರ ಸಂದೇಶ ಅತ್ಯವಶ್ಯಕವಾಗಿ ಬೇಕಾಗಿದೆ—ಸಮಾಜದಲ್ಲಿ ಶಾಂತಿ ಮತ್ತು ಪರಿಶುದ್ಧತೆಯನ್ನು ಕಾಪಾಡಿಕೊಂಡು ಬರಲು. ❄

## ಪ್ರಹಸನ ಪ್ರಸಂಗ

**ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿ, ನಮ್ಮ ಅತೀತ್ವರ ಸ್ಫೂರ್ತಿಯಲ್ಲಿ ನಾವು ನಿರಂತರ ಧಾವಿಸುತ್ತಿದ್ದೇವೆ—ಸ್ವಲ್ಪವೂ ವಿರಾಮವೇ ಇಲ್ಲ. ಆಗಾಗ ನಿಂತು ನಾವೇನು ಮಾಡುತ್ತಿದ್ದೇವೆ, ಎಲ್ಲಿಗೆ ಹೋಗುತ್ತಿದ್ದೇವೆ, ನಮ್ಮ ಜೀವನದ ಆದರ್ಶವೇನು ಎಂಬುದನ್ನು ಚಿಂತಿಸುವುದು ಅವಶ್ಯಕ. ಜೀವನದಲ್ಲಿ ಓಡುವುದು ಮಾತ್ರವಲ್ಲದೆ ನಿಲ್ಲುವುದನ್ನೂ ಕಲಿಯಬೇಕು.**

ಒಬ್ಬ ಕುದುರೆ ಸವಾರನು ಒಂದು ಹೊಸ ಕುದುರೆಯನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ಹೋದನು. ಒಂದು ದಷ್ಟ ಪುಷ್ಟವಾದ, ಚುರುಕಾದ ಕುದುರೆಯನ್ನು ಆರಿಸಿದನು. ಕುದುರೆ ಮಾರುವವನು ಅದರ ವೈಶಿಷ್ಟ್ಯವನ್ನು ವಿವರಿಸುತ್ತಾ ಹೇಳಿದನು: 'ಇದೊಂದು ವಿಶೇಷ ಕುದುರೆ. "*O my God*" (ಓ ನನ್ನ ದೇವರೆ) ಎಂದರೆ ಮಾತ್ರ ಇದು ಮುಂದೆ ಓಡುತ್ತದೆ. ಇಲ್ಲದಿದ್ದರೆ ನಿಂತಲ್ಲಿಂದ ಕದಲುವುದೇ ಇಲ್ಲ. ಹಾಗೆಯೇ ನಿಲ್ಲಿಸಬೇಕಾದರೂ ಸುಮ್ಮನೆ ಕಡಿವಾಣವನ್ನು ಎಳೆದರೆ ನಿಲ್ಲುವುದಿಲ್ಲ. "*Amen*" (ಆಮೆನ್) ಎಂದರೆ ಮಾತ್ರ ನಿಲ್ಲುತ್ತದೆ.' ಕುದುರೆ ಸವಾರನು, ತನಗೆ ಕುದುರೆಗಳ ವಿಷಯದಲ್ಲಿ ಚೆನ್ನಾಗಿ ಅನುಭವವಿದೆ, ಕುದುರೆಯನ್ನು ನಡೆಸುವುದು ಹೇಗೆಂಬುದು ತನಗೆ ಗೊತ್ತು ಎಂದು ಹೆಮ್ಮೆಯಿಂದ ಹೇಳಿ ಅದನ್ನು ಕೊಂಡುಕೊಂಡು ಹೋದನು.

ಕುದುರೆಯ ಮೇಲೆ ಹತ್ತಿ ಕುಳಿತುಕೊಂಡು ತನ್ನದೇ ರೀತಿಯಲ್ಲಿ ಅದನ್ನು ಓಡಿಸಲು ಪ್ರಯತ್ನಿಸಿದ. ಅದು ಕದಲಲಿಲ್ಲ. ಕಾಲಿನಿಂದ ಒದ್ದನು, ಕಡಿವಾಣವನ್ನು ಜಗ್ಗಿದ, ಜೋರಾಗಿ ಕೂಗಿದ, ಛಾವಟಿಯಿಂದ ಹೊಡೆದ. ಏನೇ ಮಾಡಿದರೂ ಅದು ಕದಲಲೇ ಇಲ್ಲ. ಕೊನೆಗೆ ಬಹಳ ಜೋರಾಗಿ ಮನಸ್ಸಿಗೆ ಬಂದಂತೆ ಅದನ್ನು ಹೊಡೆಯ ತೊಡಗಿದ.

ಈಗ ಕುದುರೆ ಕೋಪದಿಂದ ಓಡತೊಡಗಿತು. ನಾಗಾಲೋಟದಿಂದ ಎಲ್ಲೆಂದರಲ್ಲಿ ಮನಬಂದಂತೆ ಓಡುತ್ತಿದೆ. ಇವನಿಗೆ ಅದನ್ನು ಹೇಗೆ ನಿಗ್ರಹಿಸಬೇಕೆಂದು ತಿಳಿಯಲಿಲ್ಲ. ಈಗ ಅದು ಪರ್ವತದ ತಪ್ಪಲಿನಲ್ಲಿ ಬಹಳ ವೇಗದಿಂದ ಓಡುತ್ತಿದೆ. ಅದನ್ನು ನಿಲ್ಲಿಸುವ ವಿಧಾನ ಅವನಿಗೆ ಮರೆತೇ ಹೋಯಿತು. ಕುದುರೆಯು ಓಡುತ್ತ ಒಂದು ಭಾರಿ ಪ್ರಪಾತದ ಸಮೀಪ ಬಂತು. ಇನ್ನೇನು ಅದು ಪ್ರಪಾತದಲ್ಲಿ ಧುಮುಕಬೇಕು—ಧುಮುಕಿದರೆ ಇಬ್ಬರಿಗೂ ಸಾವು ನಿಶ್ಚಯ— ಆಗ ಅವನಿಗೆ ನೆನಪಾಯಿತು. '*Amen*' (ಆಮೆನ್) ಎಂದು ಉಚ್ಚರಿಸಿದನು. ಕುದುರೆ ತಕ್ಷಣ ನಿಂತಿತು. ಒಂದು ಹೆಜ್ಜೆ ಮುಂದೆ ಹೋಗಿದ್ದರೆ ಮೃತ್ಯುವಿನ ಬಾಯಿಗೆ ಬೀಳಬೇಕಾಗಿತ್ತು. ಸವಾರನು ಆ ಪ್ರಪಾತದ ಕಡೆ ಒಮ್ಮೆ ದೃಷ್ಟಿಸಿ ನೋಡಿದ. ಅದೊಂದು ಭಯಂಕರ ದೃಶ್ಯ. ಅವನು ಎದೆಯ ಮೇಲೆ ಕೈಯಿಟ್ಟು, '*O my God!*' ಎಂದು ಉದ್ಗರಿಸಿದ. ❑

**ನಮಗೆ ವಿಷಯಸುಖದಲ್ಲಿ ತೀವ್ರ ಆಸಕ್ತಿ. ಅದರ ದುಷ್ಪರಿಣಾಮಗಳ ಅರಿವಿದ್ದರೂ ಅವುಗಳಿಂದ ವಿಮುಕ್ತರಾಗುವುದಿಲ್ಲ. ಕಣ್ಣಿದ್ದರೂ ಕುರುಡರಂತೆ ವರ್ತಿಸುತ್ತೇವೆ.**

ಬೀದಿಯ ಬದಿಯಲ್ಲಿ ಕುರುಡನೊಬ್ಬನು ಭಿಕ್ಷೆ ಬೇಡುತ್ತ ಕುಳಿತಿದ್ದನು. ತುಂಬ ಆರ್ತಸ್ವರದಲ್ಲಿ ದಾರಿಯಲ್ಲಿ ಹೋಗುವವರನ್ನೆಲ್ಲ ಅಂಗಲಾಚಿ ಬೇಡುತ್ತಿದ್ದನು. ದಾರಿಹೋಕನೊಬ್ಬನು ದೂರದಿಂದಲೇ ಒಂದು ನಾಣ್ಯವನ್ನು ಅವನ ಕಡೆ ಎಸೆದನು. ಅದು ಅವನ ಮೈಗೆ ತಾಗಿ ನೆಲದ ಮೇಲೆ ಬಿತ್ತು. ಕೂಡಲೆ ಭಿಕ್ಷುಕನು ಅದನ್ನು ಎತ್ತಿಕೊಂಡನು. ಈಗ ದಾರಿಹೋಕನಿಗೆ ಸಂದೇಹ ಉಂಟಾಗಿ ಅವನನ್ನು 'ನೀನು ಕುರುಡ. ನಿನಗೆ ಹೇಗೆ ನಾಣ್ಯ ಕಾಣಿಸಿತು? ಅದನ್ನು ಹೇಗೆ ಎತ್ತಿ ಕೊಂಡೆ?' ಎಂದನು.

'ನಿಜ ಹೇಳಬೇಕೆಂದರೆ ನಾನು ಕುರುಡನಲ್ಲ. ಈ ಸ್ಥಳದಲ್ಲಿ ಇನ್ನೊಬ್ಬ ಕುರುಡ ಕುಳಿತುಕೊಳ್ಳುತ್ತಿದ್ದ. ಅವನು ಇಂದು ಇಲ್ಲದಿರುವುದರಿಂದ ಅವನ ಜಾಗದಲ್ಲಿ ನಾನು ಕುರುಡನಂತೆ ನಟಿಸುತ್ತ ಕುಳಿತುಕೊಂಡಿದ್ದೇನೆ ಅಷ್ಟೆ' ಎಂದನು ಆ ಭಿಕ್ಷುಕ.

'ಆ ಕುರುಡ ಎಲ್ಲಿಗೆ ಹೋಗಿದ್ದಾನೆ?'

'ಸಿನಿಮಾ ನೋಡುವುದಕ್ಕೆ.' ❑